# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು – 560001.

**ಓದಲಾಗಿದೆ:-**

ಬೆವಿಕಂ ನಿರ್ದೇಶಕ ಮಂಡಳಿ ಸಭೆಯ ಠರಾವು ಸಂಖ್ಯೆ : 63/08 ದಿನಾಂಕ: 04.03.2014

**ಪ್ರಸ್ತಾವನೆ:-**

ಬೆಂಗಳೂರು ಗ್ರಾಮೀಣ ವೃತ್ತ ವ್ಯಾಪ್ತಿಯು ಅತಿ ದೊಡ್ಡ ಭೌಗೋಳಿಕ ವಿಸ್ತೀರ್ಣ ಹೊಂದಿರುವಂತಹ ಎರಡು ತಾಲ್ಲೂಕುಗಳೊನ್ನಳಗೊಂಡಿದ್ದು, ಇವುಗಳಲ್ಲಿ ಪ್ರಮುಖವಾಗಿ ವಸತಿ ಬಡಾವಣೆಗಳು ಶೀಘ್ರಗತಿಯಲ್ಲಿ ಅಭಿವೃದ್ದಿಗೊಳ್ಳುತ್ತಿರುವುದರಿಂದ ಬಳಕೆದಾರರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆಯುಂಟಾಗಿರುತ್ತದೆ ಮತ್ತು ಇದೇ ರೀತಿ ತುಮಕೂರು ವಿಭಾಗದ ತುಮಕೂರು ನಗರ ಮತ್ತು ಗ್ರಾಮೀಣ ಉಪ ವಿಭಾಗ ವ್ಯಾಪ್ತಿಯಲ್ಲಿ ಗ್ರಾಹಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆಯುಂಟಾಗುತ್ತಿರುವುದರಿಂದ, ಉತ್ತಮ ಗುಣ ಮಟ್ಟದ ಸೇವೆ ಒದಗಿಸಲು ಗ್ರಾಹಕರ ಸಂಖ್ಯೆಯ ಏರಿಕೆಗನುಗುಣವಾಗಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕಛೇರಿಗಳನ್ನು ಪುನರ್ರಚಿಸಿ, ಹೊಸದಾಗಿ ವೃತ್ತ/ವಿಭಾಗ/ಉಪ ವಿಭಾಗ/ಶಾಖಾ ಕಛೇರಿಗಳನ್ನು ತೆರೆಯಲು ದಿನಾಂಕ 04.03.2014 ರಂದು ನಡೆದ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಸದರಿ ನಿರ್ಣಯದಂತೆ ಅಧಿಕವಾಗಿ ವೃತ್ತ/ವಿಭಾಗ/ಉಪ ವಿಭಾಗ/ಕಾರ್ಯ ಮತ್ತು ಪಾಲನಾ ಘಟಕವನ್ನು ರಚಿಸಲು ಈ ಆದೇಶ ಹೊರಡಿಸಿದೆ:-

**ಆದೇಶ ಸಂಖ್ಯೆ: ಬೆವಿಕಂ/ಬಿಸಿ31/3382/2013-14 ಬೆಂಗಳೂರು, ದಿನಾಂಕ** - 7 MAY 2014

1. ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯ ವ್ಯಾಪ್ತಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಗ್ರಾಮೀಣ ವೃತ್ತವನ್ನು ಪುನರ್ರಚಿಸಿ, ಕೆಳಕಂಡ ವಿಭಾಗಗಳನ್ನೊಳಗೊಂಡಂತೆ ಅಧಿಕವಾಗಿ ಮತ್ತೊಂದು ವೃತ್ತವನ್ನು ರಾಮನಗರ ಕೇಂದ್ರ ಸ್ಥಾನದಲ್ಲಿ ರಚಿಸಿ, ಸದರಿ ವೃತ್ತವನ್ನು **'ರಾಮನಗರ ವೃತ್ತ'** ವೆಂದು ಹೆಸರಿಸಲಾಗಿದೆ :-

    1. ರಾಮನಗರ ವಿಭಾಗ
    2. ಚಂದಾಪುರ ವಿಭಾಗ
    3. ಕನಕಪುರ ವಿಭಾಗ (ನೂತನವಾಗಿ ರಚಿಸಲಾಗಿರುವ ವಿಭಾಗ)

    ಬೆಂಗಳೂರು ಗ್ರಾಮೀಣ ವೃತ್ತವನ್ನು ವಿಭಜಿಸಿ, ರಾಮನಗರ ವೃತ್ತವನ್ನು ನೂತನವಾಗಿ ರಚಿಸಲಾದ ಪರಿಣಾಮವಾಗಿ ಬೆಂಗಳೂರು ಗ್ರಾಮೀಣ ವೃತ್ತ ಅಧಿಕಾರ ವ್ಯಾಪ್ತಿಗೆ ಒಳಪಡುವ ವಿಭಾಗಗಳ ವಿವರ ಕೆಳಕಂಡಂತಿದೆ:-

    1. ನೆಲಮಂಗಲ ವಿಭಾಗ
    2. ಯಲಹಂಕ ವಿಭಾಗ

2. ಬೆಂಗಳೂರು ಗ್ರಾಮೀಣ ವೃತ್ತ ವ್ಯಾಪ್ತಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ರಾಮನಗರ ವಿಭಾಗವನ್ನು ಪುನರ್ರಚಿಸಿ, ಕೆಳಕಂಡ ಉಪ ವಿಭಾಗಗಳನ್ನೊಳಗೊಂಡಂತೆ ಅಧಿಕವಾಗಿ ಮತ್ತೊಂದು ವಿಭಾಗವನ್ನು ಕನಕಪುರ ಕೇಂದ್ರ ಸ್ಥಾನದಲ್ಲಿ ರಚಿಸಿ, ಸದರಿ ವಿಭಾಗವನ್ನು **'ಕನಕಪುರ ವಿಭಾಗ'** ವೆಂದು ಹೆಸರಿಸಲಾಗಿದೆ :-

    1. ಕನಕಪುರ ನಗರ ಉಪ ವಿಭಾಗ
    2. ಕನಕಪುರ ಗ್ರಾಮೀಣ ಉಪ ವಿಭಾಗ
    3. ಸಾತನೂರು ಉಪ ವಿಭಾಗ
    4. ಹಾರೋಹಳ್ಳಿ ಉಪ ವಿಭಾಗ(ನೂತನವಾಗಿ ರಚಿಸಲಾಗಿರುವ ಉಪ ವಿಭಾಗ)

ರಾಮನಗರ ವಿಭಾಗವನ್ನು ವಿಭಜಿಸಿ, ನೂತನವಾಗಿ ಕನಕಪುರ ವಿಭಾಗವನ್ನು ರಚಿಸಲಾದ ಪರಿಣಾಮವಾಗಿ ರಾಮನಗರ ವಿಭಾಗದ ಅಧಿಕಾರ ವ್ಯಾಪ್ತಿಗೆ ಒಳಪಡುವ ಉಪ ವಿಭಾಗಗಳ ವಿವರ ಕೆಳಕಂಡಂತಿದೆ:-

    1. ರಾಮನಗರ ನಗರ ಉಪ ವಿಭಾಗ
    2. ರಾಮನಗರ ಗ್ರಾಮೀಣ ಉಪ ವಿಭಾಗ
    3. ಬಿಡದಿ ಉಪ ವಿಭಾಗ
    4. ಚನ್ನಪಟ್ಟಣ ನಗರ ಉಪ ವಿಭಾಗ
    5. ಚನ್ನಪಟ್ಟಣ ಗ್ರಾಮೀಣ ಉಪ ವಿಭಾಗ

3. ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯ ಮತ್ತು ಚಿತ್ರದುರ್ಗ ವಲಯ ವ್ಯಾಪ್ತಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಉಪ ವಿಭಾಗಗಳನ್ನು ಪುನರ್ರಚಿಸುವ ಮೂಲಕ ಕೆಳಕಂಡ ಮೂರು ಉಪ ವಿಭಾಗಗಳನ್ನು ನೂತನವಾಗಿ ರಚಿಸಲಾಗಿದೆ :-

**ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯ ವ್ಯಾಪ್ತಿ :-**

| ಕ್ರ.ಸಂ | ಉಪ ವಿಭಾಗದ ಹೆಸರು | ಪುನರ್ರಚಿಸಲಾಗುವ ಉಪ ವಿಭಾಗದ ವ್ಯಾಪ್ತಿ |
|---|---|---|
| 1 | ಹಾರೋಹಳ್ಳಿ | ಕನಕಪುರ ನಗರ ಉಪ ವಿಭಾಗ ವಿಭಜನೆಯಿಂದ |

**ಚಿತ್ರದುರ್ಗ ವಲಯ ವ್ಯಾಪ್ತಿ :-**

| | | |
|---|---|---|
| 2 | ಕ್ಯಾತ್ಸಂದ್ರ | ತುಮಕೂರು ನಗರ ಉಪ ವಿಭಾಗ -1, ತುಮಕೂರು ಗ್ರಾಮೀಣ ಉಪ ವಿಭಾಗ-1 ಮತ್ತು 2 ಗಳ ವಿಭಜನೆಯಿಂದ |
| 3 | ಕುಣಿಗಲ್ ಗ್ರಾಮೀಣ | ಕುಣಿಗಲ್ ಉಪ ವಿಭಾಗ ವಿಭಜನೆಯಿಂದ |

**ಟಿಪ್ಪಣಿ:** ಕುಣಿಗಲ್ ಉಪ ವಿಭಾಗವನ್ನು ಪುನರ್ರಚಿಸಿ ನೂತನವಾಗಿ ಕುಣಿಗಲ್ ಗ್ರಾಮೀಣ ಉಪ ವಿಭಾಗವನ್ನು ತೆರೆಯುವ ಪರಿಣಾಮವಾಗಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಕುಣಿಗಲ್ ಉಪ ವಿಭಾಗವನ್ನು 'ಕುಣಿಗಲ್ ನಗರ ಉಪ ವಿಭಾಗ'ವೆಂದು ಮರುಹೆಸರಿಸಲಾಗಿದೆ.

--3

4. ಸಾತನೂರು ಉಪ ವಿಭಾಗ ವ್ಯಾಪ್ತಿಯಲ್ಲಿ ಕಬ್ಬಾಳು ಕಾರ್ಯ ಮತ್ತು ಪಾಲನಾ ಘಟಕವನ್ನು ನೂತನವಾಗಿ ರಚಿಸಲಾಗಿದೆ.

5. ನೂತನವಾಗಿ ಈ ಆದೇಶದಲ್ಲಿ ರಚಿಸಲಾಗಿರುವ ವೃತ್ತ, ವಿಭಾಗ, ಉಪ ವಿಭಾಗ ಮತ್ತು ಕಾರ್ಯ ಮತ್ತು ಪಾಲನಾ ಘಟಕಕ್ಕೆ ಮಂಜೂರು ಮಾಡಲಾಗಿರುವ ಹುದ್ದೆಗಳ ವಿವರಗಳನ್ನು **ಅನುಬಂಧ-'ಅ'** ರಲ್ಲಿ ವಿವರಿಸಲಾಗಿದೆ.

6. ಮಂಜೂರು ಮಾಡಲಾಗಿರುವ 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳಿಗೆ ನೌಕರರನ್ನು ವರ್ಗಾವಣೆ ಮಾಡಲು ಸಂಬಂಧಿಸಿದ ಮುಖ್ಯ ಇಂಜಿನಿಯರ್(ವಿ) ರವರು ಸೂಕ್ತ ಕ್ರಮ ಕೈಗೊಳ್ಳುವುದು.

7. ಕಛೇರಿ ದೈನಂದಿನ ನಿರ್ವಹಣೆಗಾಗಿ ಕಂಪ್ಯೂಟರ್ ಮತ್ತು ಇತರೆ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಅಗತ್ಯತೆಯನ್ನು ಪರಿಶೀಲಿಸಿ ಒದಗಿಸಲು ಪ್ರಧಾನ ವ್ಯವಸ್ಥಾಪಕರು(ಐಸಿಟಿ ಮತ್ತು ಎಂ.ಐ.ಎಸ್), ಕಂಪನಿ ಕಾರ್ಯಾಲಯ ರವರು ಸೂಕ್ತ ಕ್ರಮ ಕೈಗೊಳ್ಳುವುದು.

8. ಹೊಸದಾಗಿ ರಚಿಸಲಾದ ಕಛೇರಿಗಳಿಗೆ ಕಛೇರಿ ಕಾರ್ಯಗಳ ನಿರ್ವಹಣೆಗಾಗಿ ಕಂಪನಿಯಲ್ಲಿ ಹಾಲಿ ಚಾಲ್ತಿಯಲ್ಲಿರುವ ನಿಯಮಗಳನುಸಾರ ವಾಹನ ಸೌಲಭ್ಯ ಪಡೆಯುವುದು.

9. ಈ ಆದೇಶದಲ್ಲಿ ನೂತನವಾಗಿ ರಚಿಸಲಾಗಿರುವ ಕಾರ್ಯ ಮತ್ತು ಪಾಲನಾ ವೃತ್ತ, ವಿಭಾಗ, ಉಪ ವಿಭಾಗ ಮತ್ತು ಶಾಖಾ ಕಛೇರಿಗಳನ್ನು ಕಾರ್ಯಾರಂಭಿಸಲು ಸಂಬಂಧಿಸಿದ ವಲಯದ ಮುಖ್ಯ ಇಂಜಿನಿಯರ್(ವಿ) ರವರುಗಳು 15 ದಿನಗಳೊಳಗಾಗಿ ಸೂಕ್ತ ಕ್ರಮ ಕೈಗೊಳ್ಳುವುದರೊಂದಿಗೆ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವುದು :-

   - ದೈನಂದಿನ ಕೆಲಸಗಳ ನಿರ್ವಹಣೆಗಾಗಿ ಅಗತ್ಯ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡುವುದು.
   - ಮಂಜೂರು ಮಾಡಲಾಗಿರುವ ಹುದ್ದೆಗಳನ್ನು ಹೊರತುಪಡಿಸಿ ಇತರೇ ಯಾವುದೇ ಸೇವೆ ಅವಶ್ಯಕವಿದ್ದಲ್ಲಿ ಅಂತಹ ಸೇವೆಗಳನ್ನು ನೋಂದಾಯಿತ ಮ್ಯಾನ್ ಪವರ್ ಏಜೆನ್ಸಿಯಿಂದ ಚಾಲ್ತಿಯಲ್ಲಿರುವ ನಿಯಮಗಳನ್ನು ಪಾಲಿಸುವುದರೊಂದಿಗೆ ಒದಗಿಸುವುದು.

10. ನೂತನವಾಗಿ ತೆರೆಯಲಾಗುವ ಕಛೇರಿಗಳನ್ನು ಕಾರ್ಯಾರಂಭಿಸಲು ಸೂಕ್ತ ಕಟ್ಟಡದ ವ್ಯವಸ್ಥೆಯನ್ನು ಒದಗಿಸಲು ಸಂಬಂಧಿಸಿದ ವೃತ್ತದ ಅಧೀಕ್ಷಕ ಇಂಜಿನಿಯರ್(ವಿ) ರವರು ಕ್ರಮ ಕೈಗೊಳ್ಳುವುದು.

11. ಹೊಸದಾಗಿ ರಚಿಸಲಾಗಿರುವ ಕಛೇರಿಗಳ ಭೌಗೋಳಿಕ ವ್ಯಾಪ್ತಿ, ವ್ಯಾಪ್ತಿಗೊಳಪಡುವ ಪ್ರದೇಶ, ಫೀಡರ್‌ಗಳು, ಪರಿವರ್ತಕಗಳು ಹಾಗೂ ಇತರೆ ವಿವರಗಳನ್ನೊಳಗೊಂಡಂತೆ ಪ್ರತ್ಯೇಕ ಆದೇಶವನ್ನು ಸಂಬಂಧಿಸಿದ ವಲಯದ ಮುಖ್ಯ ಇಂಜಿನಿಯರ್(ವಿ) ರವರುಗಳು ಹೊರಡಿಸುವುದು.

ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬರುತ್ತದೆ.

**ಆದೇಶದ ಮೇರೆಗೆ,**

7/5

**(ಎಂ.ಟಿ.ಶರಣಪ್ಪ)**
**ಪ್ರಭಾರ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)**
**ಬೆ.ವಿ.ಕಂ., ಬೆಂಗಳೂರು**

**ಪ್ರತಿಗಳು :-**

1. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಬೆ.ವಿ.ಕಂ.
2. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ವಲಯ, ಬೆ.ವಿ.ಕಂ.

3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಬೆ.ವಿ.ಕಂ.
4. ಪ್ರಧಾನ ವ್ಯವಸ್ಥಾಪಕರು(ಐ.ಟಿ.ಸಿ ಮತ್ತು ಎಂ.ಐ.ಎಸ್), ಕಂಪನಿ ಕಾರ್ಯಾಲಯ, ಬೆವಿಕಂ. - ಬೆವಿಕಂ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೋರಲಾಗಿದೆ.
5. ಅಧೀಕ್ಷಕ ಇಂಜಿನಿಯರ್(ವಿ), ಕಂಪ್ಯೂಟರ್ ಸೆಂಟರ್, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
6. ಎಲ್ಲಾ ಅಧಿಕಾರಿಗಳು, ಕಂಪನಿಕಾರ್ಯಾಲಯ, ಬೆ.ವಿ.ಕಂ., ಬೆಂಗಳೂರು.
7. ಪೋಲೀಸ್ ಅಧೀಕ್ಷಕರು, ಜಾಗೃತದಳ, ಕಂಪನಿ ಕಾರ್ಯಾಲಯ, ಬೆ.ವಿ.ಕಂ., ಬೆಂಗಳೂರು.
8. ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ ವೃತ್ತ, ಬೆ.ವಿ.ಕಂ.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ/ಜಾಗೃತದಳ ಬೆ.ವಿ.ಕಂ.
10. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಡಳಿತ ಸುಧಾರಣೆ), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
11. ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ/(ಆಂ.ಪ), ಬೆ.ವಿ.ಕಂ.
12. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನಾ, ಕನಕಪುರ ನಗರ/ಗ್ರಾಮೀಣ/ಸಾತನೂರು/ತುಮಕೂರು ನಗರ/ತುಮಕೂರು ಗ್ರಾಮೀಣ ಉಪ ವಿಬಾಗ, ಬೆವಿಕಂ.,
13. ವ್ಯವಸ್ಥಾಪಕರು, ಸಿಬ್ಬಂದಿ-2 ಮತ್ತು ಸ್ಥಿರಾಸ್ತಿ/ಲೆಕ್ಕಾಧಿಕಾರಿ, ಕಂಪ್ಯೂಟರ್ ಶಾಖೆ, ನಿಗಮ ಕಾರ್ಯಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
14. ಆಪ್ತ ಕಾರ್ಯದರ್ಶಿಗಳು: ನಿರ್ದೇಶಕರು(ಆ ಮತ್ತು ಮಾ.ಸಂ.), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
15. ಮುಖ್ಯ ಕಡತ.

**ಪ್ರತಿಗಳು ಮಾಹಿತಿಗಾಗಿ :-**

1. ಶ್ರೀ. ಎಂ.ನಾಗರಾಜ್, ಅಧ್ಯಕ್ಷರು, ಕ.ವಿ.ಪ್ರ.ನಿ.ನಿ ನೌಕರರ ಸಂಘ, ಅನಂದ ರಾವ್ ವೃತ್ತ, ಬೆಂಗಳೂರು.
2. ಶ್ರೀ. ವಿ. ವೆಂಕಟಶಿವಾರೆಡ್ಡಿ, ಅಧ್ಯಕ್ಷರು, ಕೆ.ಇ.ಬಿ. ಇಂಜಿನಿಯರುಗಳ ಸಂಘ, ಅನಂದ ರಾವ್ ವೃತ್ತ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ ನೌಕರರ ಸಂಘ/ಕ.ವಿ.ಮಂ ಇಂಜಿನಿಯರುಗಳ ಸಂಘ/ಕ.ವಿ.ಪ್ರ.ನಿ.ನಿ., ಲೆಕ್ಕಾಧಿಕಾರಿಗಳ ಸಂಘ/ಕ.ವಿ.ಪ್ರ.ನಿ.ನಿ., ಪ.ಜಾತಿ ಮತ್ತು ಪ.ಪಂಗಡಗಳ ಕಲ್ಯಾಣ ಸಂಸ್ಥೆ/ಡಿಪ್ಲೊಮೊ ಇಂಜಿನಿಯರುಗಳ ಸಂಘ, ಬೆಂಗಳೂರು ರವರುಗಳ ಮಾಹಿತಿಗಾಗಿ.

ಅನುಬಂಧ-'ಅ'

ಆದೇಶ ಸಂಖ್ಯೆ: ಬೆವಿಕಂ/ಜಿಸಿ31/3382/2013-14 ಬೆಂಗಳೂರು, ದಿನಾಂಕ 7 MAY 2014

**STATEMENT SHOWING THE DETAILS OF POSTS SANCTIONED FOR THE NEWLY CREATED OFFICES**

| Sl. No. | Name of the post | Name of the office | | | | | | | Total |
|---|---|---|---|---|---|---|---|---|---|
| | | Ramanagar Circle | Kanakpura Division | | Harohalli sub division | Kytsandra sub division | Kunigal RSD | Kabbal O & M Section Office | |
| | | | O&M | I/A | | | | | |
| 1 | 2 | 3 | 4 | 5 | 6 | 7 | 8 | 9 | 10 |
| 1 | Superintending Engineer | 1 | | | | | | | **1** |
| 2 | Deputy Controller of Accounts | 1 | | | | | | | **1** |
| 3 | Executive Engineer(Ele) | 1 | 1 | | | | | | **2** |
| 4 | Asst. Executive Engineer(Ele) | 1 | 1 | | 1 | 1 | 1 | | **5** |
| 5 | Asst. Executive Engineer(Civil) | 1 | | | | | | | **1** |
| 6 | Asst. Engineer(Ele) | 1 | 1 | | 1 | 1 | 1 | | **5** |
| 7 | Asst. Engineer(Civil) | 1 | 1 | | | | | | **2** |
| 8 | Accounts officer | 1 | 1 | 1 | | | | | **3** |
| 9 | Asst. Accounts officer | 1 | 1 | 1 | 1 | 1 | 1 | | **6** |
| 10 | Junior Engineer(Ele) | 1 | 1 | | | | 1 | 1 | **4** |
| 11 | Junior Engineer(Civil) | 1 | | | | | | | **1** |
| 12 | Senior Assistant | 2 | 4 | 1 | 1 | | | | **8** |
| 13 | Assistant | 3 | 5 | 1 | 3 | 2 | 3 | | **17** |
| 14 | Junior Assistant | 2 | 5 | 1 | 4 | 5 | | | **17** |
| 15 | Overseer | | | | | 1 | 1 | 1 | **3** |
| 16 | Meter Reader | | | | | 1 | | | **1** |

| Sl. No. | Name of the post | Name of the office | | | | | | | Total |
|---|---|---|---|---|---|---|---|---|---|
| | | Ramanagar Circle | Kanakpura Division | | Harohalli sub division | Kytsandra sub division | Kunigal RSD | Kabbal O & M Section Office | |
| | | | O&M | I/A | | | | | |
| *1* | *2* | *3* | *4* | *5* | *6* | *7* | *8* | *9* | *10* |
| 17 | Junior Meter Reader | | | | | 1 | 5 | | **6** |
| 18 | Mechanic Gr-I | | | | | | | 1 | **1** |
| 19 | Mechanic Gr-II | | | | | | | 1 | **1** |
| 20 | Daffedar | 1 | | | | | | | **1** |
| 21 | Daftary | 2 | 3 | | 1 | | | | **6** |
| 22 | Office Attendant Gr-I | 1 | 1 | | 1 | | | | **3** |
| 23 | Office Attendant Gr-II | 1 | 4 | | 2 | 1 | 1 | | **9** |
| 24 | Lineman | | | | | | | 4 | **4** |
| 25 | Assistant Lineman | | | | | 2 | 3 | 12 | **17** |
| 26 | Junior Lineman | | | | | 3 | 4 | | **7** |
| | **Total** | **23** | **29** | **5** | **15** | **19** | **21** | **20** | **132** |

**I/C GENERAL MANAGER(A & HR)**
**BESCOM.**